# ಪ್ರೀತಿಯ ಔದಾರ್ಯ

ಯೇಸು ಕ್ರಿಸ್ತನಿಗೆ ಪರಿವರ್ತನೆಗೊಂಡವರು ಉದಾರವಾಗಿ ನೀಡುವಂತದ್ದು ಮಹತ್ವದ ಕಾರ್ಯವಾಗಿತ್ತು. ಯೆಹೂದ್ಯರಿಗೆ ಮಾತ್ರ ಸಹಾಯ ಮಾಡಬೇಕೆಂಬ ವಾಡಿಕೆಯನ್ನು ಯೆಹೂದ್ಯರು ಹೊಂದಿದ್ದರು, ಆದರೆ ಅವರುಗಳು ಅನ್ಯರಿಗೂ ಸಹ ಇಂಥಹ ಮನೋಭಾವನೆ ಹೊಂದಿರಬೇಕೆಂದು ಬಯಸಲಾಗಿತ್ತು. ಗಾಯಗೊಂಡವನಾದ ಯೆಹೂದ್ಯನಿಗೆ, ಸಮಾರ್ಯದವನು ತೋರಿದ ಆದರಣೆಯಲ್ಲಿ, ಇತರೆ ಜನಾಂಗದವರ ಕುರಿತ (ಲೂಕ 10:25-37) ಚಿಂತನೆಯನ್ನು ಸ್ಪಷ್ಟಪಡಿಸುತ್ತದೆ.

ಮಾನವರ ಅಗತ್ಯದ ಕುರಿತು ಅನ್ಯರ ಅಲ್ಪವಾಗಿ ಮಾತ್ರ ಚಿಂತಿಸಿದರು. ಅವರು ಮಾನವರಿಗೆ ಅಗೌರವ ಸೂಚಿಸುವಂಥದ್ದೇ, ಅವರ ವಿಗ್ರಹಾರಾಧನೆಯಾಗಿತ್ತು, ಅನ್ಯ ಜನರು ತಮ್ಮ ದೇವತೆಗಳಿಗೆ ತಮ್ಮ ಮಕ್ಕಳನ್ನೇ ಬಲಿ ಕೊಡುತ್ತಿದ್ದರು, ಹಾಗೂ ಹೂನವಾದ ಪ್ರಾಣಿಗಳನ್ನು ತಮ್ಮ ಊಹೆಯ ದೇವತೆಗಳಿಗೆ ಬಲಿನೀಡಿ, ಬೆಟ್ಟಗಳನ್ನು ಹಾಗೂ ನದಿಗಳನ್ನು ಆರಾಧಿಸಿದರು. ಈ ವಿಧವಾದ ಅವರ ಪೂಜಾ ವಿಧಿಗಳು, ಮಾನವರು ಸತ್ಯ ದೇವರ ಸ್ವರೂಪದಲ್ಲಿ ಉಂಟಾಗಿರುವ ಎಂಬ ತತ್ವಕ್ಕೆ ವಿರೋಧವಾಗಿದ್ದವು.

ಯೇಸು ಯೆಹೂದ್ಯರಿಗೆ, ಅವರು ತಮ್ಮ ಮನೋಭಾವವನ್ನು ಉತ್ತಮ ರೀತಿಯಲ್ಲಿ ವೃದ್ಧಿಪಡಿಸಿಕೊಳ್ಳಬೇಕೆಂಬ, ಹೊಸ ಅಪ್ಪಣೆಯನ್ನು ನೀಡಿ, ಕ್ರೈಸ್ತರಿಗೆ ಅದು ಪ್ರಮುಖ ಗುರುತಾಗುವಂತೆ ಮಾಡಿದನು - ಅದೇನೆಂದರೆ “ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬದೇ” (ಯೋಹಾನ 13:34, 35). ಅವರು ತಮ್ಮ ನೆರೆಹೊರೆಯವರನ್ನು ಪ್ರೀತಿಸಬೇಕು, ಹಾಗೂ ಎರಡನೆಯದಾಗಿ ಅವರು ಸರ್ವಶಕ್ತನಾದ ಒಬ್ಬನೇ ದೇವರನ್ನು ಪ್ರೀತಿಸಬೇಕೆಂದು ಅಪ್ಪಣೆ ನೀಡಿದನು (ಮತ್ತಾಯ 22:37-39). “ವೈರಿಗಳನ್ನೂ ಸಹ ಪ್ರೀತಿಸಬೇಕೆಂಬ ಸವಾಲನ್ನು ಯೇಸು ನೀಡಿರುವನು” (ಮತ್ತಾಯ 5:43-48).

ಸಭೆ ಎಂಬ ಕ್ರಿಸ್ತನ ಆತ್ಮೀಕ ಶರೀರವು, ಅದರ ಶಿರಸ್ಸಿನ ನಾಯಕತ್ವವನ್ನು ಒಪ್ಪಿಕೊಳ್ಳಬೇಕು (ಕೊಲೊಸ್ಸೆ 1:18); ಆದದರಿಂದ, ಅಪೊಸ್ತಲರ ಕೃತ್ಯದಲ್ಲಿ ಆರಂಭವಾದ ಆತ್ಮೀಕವಾದ ಹಣದ ವ್ಯವಹಾರವು ಯೇಸುವಿನ ಸಹೋದರತ್ವದ ಬೋಧನೆಗನುಗುಣವಾಗಿ ಊರ್ಜಿತಗೊಳ್ಳಬೇಕಿತ್ತು. ಈ ಸಹೋದರರ ಭ್ರಾತೃತ್ವದಲ್ಲಿ ಸಹಾಯ ಮಾಡುವ ಪ್ರೀತಿಯ ಔದಾರ್ಯವು ಹೊರತಾಗಿರಲಿಲ್ಲ.

## ಮೊದಲನೆಯ ಕೊರತೆ: ಕೊರತೆಗಳನ್ನು ಹೊಂದಿದ್ದ ಒಂದು ಸಭೆ

ಅಪೊಸ್ತಲರ ಕೃತ್ಯಗಳು 2:41 ಮತ್ತು 4:4ರ ಪ್ರಕಾರ, 2:9-11ರಲ್ಲಿ ದಾಖಲಾಗಿರುವಂತೆ, ಹದಿನೈದು ದೇಶದ ಜನರು ಅಪೊಸ್ತಲರೊಂದಿಗೆ ಸೇರಿದ್ದರು, ಅವರ ಸಂಗಡ 1:15ರಲ್ಲಿರುವಂತೆ 120 ಜನ ಶಿಷ್ಯರೂ ಸಹ ಹಾಜರಿದ್ದರು. ಅವ ಯೋಜನೆಗಳಿಗಿಂತಲೂ, ಹೆಚ್ಚಾದ ದಿವಸಗಳ ಕಾಲ ಈ ಅತಿಥಿಗಳು ಯೆರೂಸಲೇಮಿನಲ್ಲಿ ವಾಸ್ತವ ಮಾಡಿದ್ದರು, ಆಗ ಅವರಿಗೆ ಆಹಾರ ಹಾಗೂ ಇತರೆ ಕೊರತೆಗಳು ಉಂಟಾದವು. ಅವೆಲ್ಲರೂ ಈ ವಿಧವಾಗಿ ಯೆರೂಸಲೇಮಿನಲ್ಲಿ ತಂಗಿರುವಾಗ, ಮತ್ತು ಅವರು ಕ್ರೈಸ್ತರಾದ ಕಾರಣ, ಅವರ ಸ್ವಜನರಿಂದಲೇ ಅವರಿಗೆ ಹಿಂಸೆಯುಂಟಾಯಿತು. ಆದ್ದರಿಂದ ಅನೇಕರು ತಮ್ಮ ಸ್ವಾಸ್ತ್ಯಗಳನ್ನು ಮಾರಿ ಅದರಲ್ಲಿ ಬಂದ ಹಣವನ್ನು “ಅಪೊಸ್ತಲರ ಪಾದಗಳಿಗೆ” ತಂದು ಹಾಕಿದರು (ಅಪೊಸ್ತಲರ ಕೃತ್ಯಗಳು 4:35). “ಹಣಕಾಸಿನ ಸಂಗ್ರಹಕ್ಕೆ” ಲೂಕನು “ಅಪೊಸ್ತಲರ ಪಾದ” ಎಂದು ವಿವರಿಸಿರುವನು. ಬಹುಶಃ ಈ ದಿನದ ಸಭೆಗಳಲ್ಲಿನ ಬ್ಯಾಂಕಿನ ಠೇವಣಿ ಅಥವಾ ಸಭಾ ಸಂಗ್ರಹಣೆ ಎಂಬದಕ್ಕೆ

ಹೊಂದಿಸಬಹುದು. ಅಗತ್ಯವಿದ್ದವರಿಗೆ ಅದನ್ನು ವಿತರಿಸಲಾಯಿತು (ಅಪೊಸ್ತಲರ ಕೃತ್ಯಗಳು 2:44, 45).

ಈ ಅಗತ್ಯತೆಗಳನ್ನು ಪೂರೈಸುವಲ್ಲಿ ಗಂಭೀರವಾದ ಚಿಂತನೆಯನ್ನು ಮಾಡಲಾಯಿತು. ಯೆರೂಸಲೇಮಿನ ಕ್ರೈಸ್ತರೆಲ್ಲರೂ ಒಂದು ಸಾಮಾನ್ಯವಾದ ಸಂಘವನ್ನು ಮಾಡಿ ಅದಕ್ಕೆ ಕುಟುಂಬದಲ್ಲಿದ್ದ ಹಾಗೂ ವೈಯಕ್ತಿಕವಾಗಿದ್ದ ಆಸ್ತಿ ಪಾಸ್ತಿಗಳನ್ನು ತಂದು ನೀಡಲಾಯಿತು ಎಂಬುದು ಕೆಲವರ ಅಭಿಪ್ರಾಯವಾಗಿದೆ. ಇದರಲ್ಲಿ ಒಂದು ಸಾಮೂಹಿಕವಾದ ಸಮತಾವಾದವನ್ನು ನೀಡಲಾಗಿದೆ ಎಂಬುದು ಕೆಲವರ ವಾದವಾಗಿದೆ. ಈ ಏರ್ಪಾಟಿನಲ್ಲಿ ಸಭೆಯು ಎಲ್ಲರ ಆಸ್ತಿಗೆ ಒಡೆಯತ್ವವನ್ನು ವಹಿಸಿ, ಸಾಮೂಹಿಕವಾಗಿ ಎಲ್ಲರ ಕೊರತೆಗಳನ್ನು ನೀಗಿಸುವ ಸಂಘಟನೆಯಾಗುತ್ತದೆ.

ಆದರೆ, ಲೂಕನು ಈ ವಿಧವಾದ ವಿವರಣೆಯನ್ನು ನೀಡಿರುವದಿಲ್ಲ, "ಆದರೆ ಹೇಗೂ ಈ ಕ್ರೈಸ್ತರು, ತಮ್ಮದೆಲ್ಲವನ್ನು ಹುದುವಾಗಿ ಅನುಭೋಗಿಸುತ್ತಿದ್ದರು" (ಅಪೊಸ್ತಲರ ಕೃತ್ಯಗಳು 2:44). ತಮ್ಮ ತಮ್ಮ ಚರಸ್ಥಿರ ಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು (ಅಪೊಸ್ತಲರ ಕೃತ್ಯಗಳು 2:45). ಕೊರತೆಗಳು ನೀಗಿದ ನಂತರ, ಮಾರುವದು ಹಾಗೂ ಹಂಚುವದು ಸಹ ನಿಂತು ಹೋದವು ಎಂಬದು ಕೆಲವರ ಅಭಿಪ್ರಾಯವಾಗಿದೆ (ಅಪೊಸ್ತಲರ ಕೃತ್ಯಗಳು 2:45). ಈ ಯೆರೂಸಲೇಮಿನ ಜನರು ತಮ್ಮಲ್ಲಿದ್ದದ್ದೆಲ್ಲವನ್ನು ಒಟ್ಟಾಗಿ ಮಾರದೆ ಹೋದರೂ, ಅಗತ್ಯತೆಗಳನ್ನು ನೀಗಿಸುವವರೆಗೆ ತಮ್ಮ ವೈಯಕ್ತಿಕವಾದ ಸೊತ್ತುಗಳನ್ನು ಮಾರಿದರು. ವಿತರಣೆಯ ವಿಚಾರದಲ್ಲೂ ಇದೇ ವಿಧವಾದ ಕ್ರಮವನ್ನು ಅನುಸರಿಸಲಾಗಿದೆ: "ಯಾಕಂದರೆ ಹೊಲ ಮನೆಗಳಿದ್ದವರು ಅವುಗಳನ್ನು ಮಾರಿ ಬಂದ ಕ್ರಯವನ್ನು ತಂದು ಅಪೊಸ್ತಲರ ಪಾದಗಳ ಬಳಿಯಲ್ಲಿ ಇಡುತ್ತಿದ್ದರು"; ಅದನ್ನು ಪ್ರತಿಯೊಬ್ಬರಿಗೂ "ಅವನವನ ಅವಶ್ಯದಂತೆ ಹಂಚಿಕೊಡುತ್ತಿದ್ದರು" (ಅಪೊಸ್ತಲರ ಕೃತ್ಯಗಳು 4:35). ಅಗತ್ಯತೆಗಳ ಕೊರತೆಯು ನೀಗಿ, ಅವರು ಸಂತೃಪ್ತರಾದಾಗ, ಅವರು ಇನ್ನು ಮುಂದೆ ಯಾವುದೇ ಆಸ್ಥಿಯನ್ನು ಮಾರಿ, ಅದರ ಹಣವನ್ನು ನೀಡಲಿಲ್ಲ. ಕೊರತೆಯು ನೀಗಿದಾಗ, ಮಾರಾಟವೂ ಸಹ ಸ್ಥಗಿತವಾಯಿತು.

ಯೆರೂಸಲೇಮಿನ ಅನೇಕರು ಆಸ್ತಿಯನ್ನು ಹೊಂದಿದ್ದರು ಎಂಬ ಮಾಹಿತಿಯನ್ನು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಮುಂದೆ ಗಮನಿಸುತ್ತೇವೆ. ಅನನೀಯ ಹಾಗೂ ಸಪ್ಫೈರಳು, ಈ ಸಮಯದಲ್ಲಿ ತಮ್ಮ ಸೊತ್ತನ್ನು ಮಾರದೆ, ಮುಂದಿನ ಸಮಯಕ್ಕಾಗಿ ಕಾದರು (ಅಪೊಸ್ತಲರ ಕೃತ್ಯಗಳು 5:4). ಹಾಗೂ ಅವರು ತಮ್ಮ ಆಸ್ತಿಯನ್ನು ಮಾರದೆ, ತಮ್ಮ ಬಳಿಯಲ್ಲೆ ಇಟ್ಟುಕೊಂಡಿದ್ದರೂ ದೇವರು ಅವರನ್ನು ಆಶೀರ್ವದಿಸುವನೆಂದು ಪೇತ್ರನು ಅವರಿಗೆ ತಿಳಿಸಿದ್ದನು (ಅಪೊಸ್ತಲರ ಕೃತ್ಯಗಳು 5:4). ಆಸ್ತಿಯನ್ನು ಹೊಂದಿದ್ದ ಯೊಪ್ಪದ ಚರ್ಮಕಾರನಾದ ಸೀಮೋನನೆಂಬ ಮತ್ತೊಬ್ಬನು ಪೇತ್ರನನ್ನು ತನ್ನ ಮನೆಗೆ ಆಹ್ವಾನಿಸಿದ್ದನು (ಅಪೊಸ್ತರ ಕೃತ್ಯಗಳು 9:43; 10:6), ಮಾರ್ಕನೆನಿಸಿಕೊಳ್ಳುವ ಯೋಹಾನನ ತಾಯಿಯಾದ ಮರಿಯಳು ಸಹ ತನ್ನ ಮನೆಯನ್ನು ಮಾರಾಟ ಮಾಡಿರಲಿಲ್ಲ; ಪೇತ್ರನ ಸೆರೆಮನೆಯ ಸಮಯದಲ್ಲಿ ಈಕೆಯ ಮನೆಯನ್ನು ವಿಶೇಷ ಪ್ರಾರ್ಥನಾ ಕೂಟಕ್ಕಾಗಿ ಉಪಯೋಗಿಸ ಲಾಗಿತ್ತು (ಅಪೊಸ್ತಲರ ಕೃತ್ಯಗಳು 12:12). ಕೆಲವು ವರ್ಷಗಳ ನಂತರದಲ್ಲಿ ಜೀವಿಸಿದ್ದ ಮ್ನಾಸೋನನೆಂಬವನು ಯೆರೂಸಲೇಮಿನಲ್ಲಿ ಸ್ವಂತ ಆಸ್ತಿಯನ್ನು ಹೊಂದಿದ್ದನು. ಪೌಲ ಮತ್ತು ಸಂಗಡಿಗರು ಮೂರನೇ ಸೇವಾ ಪ್ರಯಾಣದಿಂದ ಹಿಂದಿರುಗಿದಾಗ ಅವನ ಮನೆಯಲ್ಲಿ ಅತಿಥಿಗಳಾಗಿದ್ದರು (ಅಪೊಸ್ತಲರ ಕೃತ್ಯಗಳು 21:16).

ಆದ್ದರಿಂದ ಕ್ರೈಸ್ತರು ಸಮತಾವಾದಿಗಳ ರೀತಿಯಲ್ಲಿ ವರ್ತಿಸಲಿಲ್ಲವೆಂದು ಸ್ಪಷ್ಟವಾಗಿರುತ್ತದೆ. ಅವರಲ್ಲಿದ್ದಂಥ ಸಕಲವನ್ನು ಸ್ಥಳೀಯ ಸಭೆಗೆ ನೀಡಬೇಕೆಂಬ ನಿಯಮವಿರಲಿಲ್ಲ ಮತ್ತು ಇದು ಗಂಟಾಗಿ ಸಂಗ್ರಹಿಸಿದ ಹಣದಲ್ಲಿ ಬದುಕಬೇಕೆಂಬ ನಿಯಮವು ಸಹ ಇರಲಿಲ್ಲ. 2ನೇ

ಅಧ್ಯಾಯದಲ್ಲಿ ಉದ್ಭವಿಸಿದ ಕೊರತೆಯು ಕೆಲವು ಕಾಲ ಮಾತ್ರ ಮುಂದುವರೆದಿತ್ತು, ಮತ್ತು 4ನೇ ಅಧ್ಯಾಯದಲ್ಲಿ ಉದ್ಭವಿಸಿದ ಕೊರತೆಯೂ ಸಹ ಕೆಲಕಾಲ ಮಾತ್ರ ಇತ್ತು. ಕೊರತೆಯು ನೀಗುವವರೆಗೆ ಕ್ರೈಸ್ತರು ತಮ್ಮ ಆಸ್ತಿಯನ್ನು ಮಾರಲು ಸಿದ್ಧರಾಗಿದ್ದರು.

ಸಹೋದರರ ಅಗತ್ಯತೆಗನುಗುಣವಾಗಿ, ತನುಮನ ಧನದ ಔದಾರ್ಯವನ್ನ ಕ್ರೈಸ್ತರು ಹೃದಯ ಪೂರ್ವಕವಾಗಿಯೂ ಹಾಗೂ ಸ್ವ ಇಚ್ಛೆಯಿಂದಲೂ ನೀಡಿದರು. ಅದನ್ನು ನೂತನ ವಾದ ಮನಸ್ಸಿನಿಂದಲೂ ಭ್ರಾತೃತ್ವದಿಂದಲೂ ನೀಡಲಾಯಿತು, ಅದು ಕ್ರಿಸ್ತನಿಂದ ಉಂಟಾದ ಸಹಜವಾದ ಆಸಕ್ತಿಯಾದ್ದರಿಂದ, ಅದು ವಿಶೇಷವಾದ ಔದಾರ್ಯವಾಗಿ ತೋರಿಬಂತು.

ಯೆಹೂದ್ಯ ಪಟ್ಟಣದಲ್ಲಿ ಈ ವಿಧವಾದ ಸ್ವ ಇಚ್ಛೆಯ ದಾನವು ಗುರುತರವಾಗಿದ್ದರಿಂದ ಲೂಕನು, "ಬಹಳ ದಯೆಯು ಅವರೆಲ್ಲರ ಮೇಲೆ ಇತ್ತು" ಎಂದು ಬರೆದಿರುವನು (ಅಪೊಸ್ತಲರ ಕೃತ್ಯಗಳು 4:33). ಈ ಕ್ರಿಯೆಗಳನ್ನು ದೃಷ್ಟಿಸಿದ ಅವರ ಸುತ್ತಲಿದ್ದ ಜನರಿಗೆ ಆಶ್ಚರ್ಯವಾಗಿ ರಬಹುದು. ಅನನೀಯ ಮತ್ತು ಸಪ್ಫೈರಳು ತಮ್ಮ ಸೊತ್ತಿನ ಕುರಿತು ಪವಿತ್ರಾತ್ಮನಿಗೆ ಸುಳ್ಳು ಹೇಳಿ ದಾಗ, ಕರ್ತನು ಅವರಿಗೆ ಮರಣ ಶಿಕ್ಷೆಯನ್ನು ನೀಡಿದನು (ಅದು ಪೇತ್ರನ ಆದೇಶವಾಗದೆ, ಕರ್ತನದೇ ಆಗಿತ್ತು), "ಸರ್ವಸಭೆಗೂ, ಈ ಸಂಗತಿಗಳನ್ನು ಕೇಳಿದವರೆಲ್ಲರಿಗೂ ಮಹಾಭಯ ಹಿಡಿಯಿತು" (ಅಪೊಸ್ತಲರ ಕೃತ್ಯಗಳು 5:11). ಭಯದ ನಿಮಿತ್ತವಾಗಿ ಅನೇಕರು "ಅಪೊಸ್ತಲರ" ಕೂಟಕ್ಕೆ ಬರುವದನ್ನು ನಿಲ್ಲಿಸಿದರು (ಅಪೊಸ್ತಲರ ಕೃತ್ಯಗಳು 5:13); ಆದರೆ ಅಪೊಸ್ತಲರ ಕೃತ್ಯಗಳು 5:14ರಲ್ಲಿ "ಮತ್ತು ಇನ್ನು ಎಷ್ಟೋ ಮಂದಿಗಂಡಸರೂ ಹೆಂಗಸರೂ ಕರ್ತನಲ್ಲಿ ನಂಬಿಕೆಯಿಡುವವರಾಗಿ ಅವರ ಮಂಡಲಿಯನ್ನು ಸೇರಿಕೊಳ್ಳುತ್ತಿದ್ದರು" ಇದು ಯೆಹೂದ್ಯರ ಜ್ಞಾನಕ್ಕೆ ಹೊಸ ಅನುಭವವಾಯಿತು.

## ಎರಡನೆಯ ಸಂಗತಿ: ವಿಧವೆಯರಲ್ಲಿದ್ದ ಕೊರತೆ

ವಿಧವೆಯರಲ್ಲಿದ್ದ ಕೊರತೆಯನ್ನು ಪರಿಹಾರ ಮಾಡುವ ಸಲುವಾಗಿ, ಏಳು ಜನರನ್ನು ನೇಮಕ ಮಾಡಲಾಯಿತು (ಅಪೊಸ್ತಲರನ್ನು ಹೊರತು ಪಡಿಸಿ ಅಪೊಸ್ತಲರ ಕೃತ್ಯಗಳು 6:1-6). ಈ ವಿಚಾರವು ಸಹ ಯೆರೂಸಲೇಮಿನವರಲ್ಲಿ ಪರಿಣಾಮವನ್ನು ಉಂಟುಮಾಡಿತು. ವಿಧವೆಯರಿಗೆ ತೋರಿದ ಅನುಕಂಪದ ಔದಾರ್ಯದ ನಿಮಿತ್ತ ಅನೇಕ ಶಿಷ್ಯರು ಹೆಚ್ಚಾದರು ಎಂದು ಲೂಕನು ತಿಳಿಸಿ, ಯಾಜಕರಲ್ಲಿಯೂ ಬಹು ಜನರು ಕ್ರಿಸ್ತ ನಂಬಿಕೆಗೆ ಒಳಗಾಗುತ್ತಾ ಇದ್ದರು ಎಂದಿರುವನು (ಅಪೊಸ್ತಲರ ಕೃತ್ಯ ಗಳು 6:7).

ಅಧ್ಯಾಯ 2ರ ಅನುಭವದ ಮುಂದಿನ ಎರಡು ಅಥವಾ ಮೂರು ವರ್ಷಗಳ ಅಂತರದಲ್ಲಿ ಈ ಘಟನೆಯ ಜರುಗಿರಬಹುದು ಎಂಬುದು ಅನೇಕ ಪಂಡಿತರ ಅಭಿಪ್ರಾಯವಾಗದೆ. ಈ ವಿಚಾರದಲ್ಲಿ ಅಪೊಸ್ತಲರು ಹೆಚ್ಚು ಗಮನ ನೀಡದೆ ಇದ್ದರೂ, ಆದರೆ ಅವರು ಉಪಯೋಗಿಸಿದ ದೇವಭಕ್ತ ಜನರ ಸೇವೆಯ ಪ್ರಮುಖವಾದ ನಿಯಮಗಳನ್ನು ತಿಳಿಸುತ್ತದೆ.

ಆ ಪ್ರಾಮುಖ್ಯತೆಗಳಲ್ಲಿ ದೇವ ವಾಕ್ಯದ ಬೋಧನೆಯು ಮುಖ್ಯ ಪಾತ್ರವಹಿಸುತ್ತದೆ. ಎರಡನೆಯದಾಗಿ, ಕೊರತೆಯುಳ್ಳವರನ್ನು ಪರಾಂಭರಿಸುವದು, ಸುವಾರ್ತೆಗಿಂತ ಪ್ರಮುಖವಲ್ಲ ಎಂದು ಭಾವಿಸಬಾರದು. ಮೂರನೆಯದಾಗಿ, ಅರ್ಹರಾದ ಸ್ತ್ರೀ ಪುರುಷರುಗಳಿಗೆ ಈ ಉದ್ಯೋಗವನ್ನು ವಹಿಸಲೂ ಬಹುದು. ನಾಲ್ಕನೆಯದಾಗಿ, ಸಭೆಗ ಳಲ್ಲಿ, ಈ ಉದ್ಯೋಗವನ್ನು ನಡೆಸಲು ಅನೇಕ ಸ್ತ್ರೀ ಪುರುಷರು ಸಿಗುವವರಾಗಿರುತ್ತಾರೆ. ಐದನೆಯದಾಗಿ, ಸಭೆಯು, ಜನರ ಧೈಹಿಕ ಕೊರತೆಗಳನ್ನು ನೀಗಿಸುವಾಗ, ಸಮಾಜದಲ್ಲಿ ಸಭೆಯು ತನ್ನ ಪ್ರಭಾವವನ್ನು ಬೀರಲು ಸಮರ್ಥವಾಗಿರುತ್ತದೆ. ಆರನೆಯದಾಗಿ, ದೇವ ಸೇವೆ ಮಾಡಲು ಬಯಸುವ ಸಭೆಗಳಿಂದ ಶ್ರೇಷ್ಠವಾದ ಮಾದರಿಯಾಗಿದೆ.

## ಮೂರನೆಯ ಸಂಗತಿ ಕೊರತೆಗಳಿರುವ ಸಭೆಗಳು

ಅಗಬನೆಂಬ ಪ್ರವಾದಿಯು ಲೋಕಕ್ಕೆ ಭಯಂಕರವಾದ ಕ್ಷಾಮ ಬರುತ್ತದೆ ಎಂದು ಪ್ರವಾದಿಸಿದ್ದನು (ಅಪೊಸ್ತಲರ ಕೃತ್ಯಗಳು 11:28), ಕ್ಲೌದ್ಯದ ಕೈಸರನ ದಿವಸಗಳಲ್ಲಿ ನಾಲ್ಕು ಕ್ಷಾಮಗಳು ಉಂಟಾಗಿತ್ತು ಎಂದು ಲೂಕನು ದಾಖಲಿಸಿ, ಅದರಲ್ಲಿ ಮೂರು ಕ್ಷಾಮಗಳು ರೋಮಾಯ ಮತ್ತು ಗ್ರೀಸ್‌ಗಳಲ್ಲಿ ದುಷ್ಪರಿಣಾಮವನ್ನು ಬೀರಿತು ಎಂದಿರುವನು, ಹಾಗೂ ಒಂದು ಕ್ಷಾಮವು ಪಾಲೇಸ್ತೇನಿನಲ್ಲಿ ದುಷ್ಪರಿಣಾಮ ಮಾಡಿತು ಎಂದಿರುವನು. ಕ್ರಿ.ಶ 45ರಲ್ಲಿ ಯುದಾಯದಲ್ಲಿಯೂ, ಸಭೆ ಸಂಸ್ಥಾಪನೆಗೊಂಡ ಕೆಲವಾರು ವರ್ಷಗಳಲ್ಲಿ ಈ ಮೂರನೆಯ ಘಟನೆಯು ನಡೆದಿತ್ತು ಎಂದಿರುವನು.

ಯೆರೂಸಲೇಮಿನ ಕೊರತೆಯನ್ನು ನೀಗಿಸುವಲ್ಲಿ ಅಂತಿಯೋಕ್ಯದ ಸಭೆಗಳವರು ಉದಾರವಾದ ದಾನವನ್ನು ತಕ್ಷಣವೇ ಮಾಡಿದರು (ಅಪೊಸ್ತಲರ ಕೃತ್ಯಗಳು 11:30). ಸಭೆಯ "ಪ್ರತಿಯೊಬ್ಬನು" ಈ ಉದಾರವಾದ ದೇಣಿಗೆಯನ್ನು ನೀಡಿದರು ಎಂಬ ವಿಶೇಷ ವಾದ ಹೇಳಿಕೆಯನ್ನು ಲೂಕನು ನೀಡಿರುವನು. ಅಗತ್ಯಕ್ಕೆ ತಕ್ಕ ಹಾಗೆ ಪ್ರತಿಯೊಬ್ಬನು ಸಮನಾದ ಸಹಾಯವನ್ನು ಮಾಡಿದನು, ದೇವ ಸಂಘಟನೆಯು ಗೌರವಾರ್ಥದಿಂದ ಸಭಾ ಹಿರಿಯರಿಗೆ ಹಣವನ್ನು ಕಳುಹಿಸಿದರು. ಹಾಗಾದರೆ ಈ ಹಣವನ್ನು ಅವರು "ಹಿರಿಯರ ಪಾದಕ್ಕೆ ತಂದರು" ಎಂದು ಒಬ್ಬನು ಹೇಳಬಹುದು. ನೀಡುವಿಕೆಯ ಕ್ರಮ ಏನೇ ಇದ್ದರೂ, ಅಂತಿಯೋಕ್ಯದವರು, ಯೆರೂಸಲೇಮಿನ ಸಹೋದರರಿಗೆ ಸಹಾಯ ಮಾಡಿದರಷ್ಟೆ ಆದರೆ ಆ ಹಣದ ವ್ಯವಹಾರವನ್ನು ಸಭಾಹಿರಿಯರೇ ನಿರ್ವಹಿಸಿದರೆಂಬ ಸೂಚನೆಯನ್ನು ಕಾಣುತ್ತೇವೆ. ಈ ದಾನವನ್ನು ತಲುಪಿಸುವದಕ್ಕೋಸ್ಕರ ಪ್ರಭಾವಿ ಪ್ರಸಂಗಿಗಳಾದ ಬಾರ್ನಬ ಮತ್ತು ಸೌಲರು ತಮ್ಮ ಸುವಾರ್ತಾ ಸೇವೆಯ ಯಾತ್ರೆ ಮೊಟಕುಗೊಳಿಸಿದರು (ಅಪೊಸ್ತಲರ ಕೃತ್ಯಗಳು 11:30).

ಸಿರಿಯದ ಅಂತಿಯೋಕ್ಯದ ಅನ್ಯರ ಬಳಿಗೆ ಯೆಹೂದ್ಯರು ಹೋಗುವವರಾಗಿದ್ದರೂ, (ಅಪೊಸ್ತಲರ ಕೃತ್ಯಗಳು 11:19), ಯೆಹೂದ್ಯರಿಗೆ, ಯೆಹೂದ್ಯರೇ ಸುವಾರ್ತೆ ಸಾರಲು ಹಿಂಜರಿದಿದ್ದರು (ಅಪೊಸ್ತಲರ ಕೃತ್ಯಗಳು 11:20). ಆ ಹೊಸ ಸಹೋದರರಿಗೆ ಆತ್ಮೀಕ ಸಹಾಯ ಮಾಡಲು ಯೆರೂಸಲೇಮಿನ ಸಹೋದರರು ಬಾರ್ನಬನನ್ನು ಅವರ ಬಳಿಗೆ ಕಳುಹಿಸಿದಾಗ, ಪೌಲನನ್ನು ತನ್ನ ಸಹಾಯಕ್ಕಾಗಿ ತನ್ನ ಸಂಗಡ ಕರೆದೊಯ್ದನು (ಅಪೊಸ್ತಲರ ಕೃತ್ಯಗಳು 11:21-26). ಪೌಲ ಮತ್ತು ಬಾರ್ನಬರು ಈ ಅಂತಿಯೋಕ್ಯ ಸಭೆಯಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ಸೇವೆ ಮಾಡಿದ್ದರು. ಯೆಹೂದ್ಯ ಹಾಗೂ ಅನ್ಯರು ಮಿಶ್ರವಾಗಿದ್ದ ಈ ಸಭೆಯವರನ್ನು ಜನರು ಪ್ರಥಮವಾಗಿ, "ಕ್ರೈಸ್ತರೆಂದು ಕರೆದರು." ಸಾರ್ವತ್ರಿಕ ಸುವಾರ್ತೆಯನ್ನು ಪೂರ್ಣವಾಗಿ ಆಚರಣೆಗೆ ತರುವವರೆಗೆ ಈ ಸಭೆಗಳವರು "ಕ್ರೈಸ್ತರೆಂಬ" ನಾಮಾಂಕಿತವನ್ನು ಪಡೆದಿರಲಿಲ್ಲ ಎಂಬುದನ್ನು ಅರಿಯಬೇಕಾಗಿದೆ.

ನಂತರ, ಪೌಲನು ಯುದಾಯದವರಿಗೆ ಔದಾರ್ಯದ ದಾನವನ್ನು ಮಾಡಬೇಕೆಂದು ರೋಮಾಯರಲ್ಲಿ ಬೇಡಿಕೊಂಡನು (ರೋಮಾಪುರ 15:26, 27). ರೋಮಾಯದ ಅನ್ಯರ ಜನರಿಗೆ, ಯೆರೂಸಲೇಮಿನ ಸಹೋದರರು ಸುವಾರ್ತೆಯ ಮೂಲಕ ಅವರ ಆತ್ಮೀಕ ಕೊರತೆಗಳನ್ನು ಪರಿಹರಿಸಿದ್ದರಿಂದ, ಯುದಾಯದವರ ದೈಹಿಕ ಕೊರತೆಗಳನ್ನು ರೋಮಾಯದವರು ಪರಿಹರಿಸುವದು ಯೋಗ್ಯವಾದದ್ದೆಂದು ಪೌಲನು ಸೂಚನೆಯನ್ನು ನೀಡಿ ದ್ದನು. ದೈಹಿಕವಾದ ದಾನವು, ವಿಶೇಷವಾದ ಆತ್ಮೀಕ ಪರಿಣಾಮವನ್ನು ಬೀರಿತ್ತದೆ!

## ನಾಲ್ಕನೆಯ ಸಂಗತಿ: ಪುನ ಕೊರತೆಗಳು ಉಂಟಾದ ಸಭೆಗಳು

ಪೌಲನು ಮೂರನೆಯ ಸೇವಾ ಪ್ರಯಾಣವನ್ನು ಅಂತ್ಯಗೊಳಿಸಿ ಯೆರೂಸಲೇಮಿಗೆ ಬಂದನು. ಹರಕೆ ಹೊತ್ತಿದ ನಾಲ್ಕು ಜನ ಯುವಕರನ್ನು (ಅವರ ವೆಚ್ಚಗಳನ್ನು ಬರಿಸಬೇ

ಕಾದಾಗ) ಯೆರೂಸಲೇಮಿನ ದೇವಾಲಯದ ಹಿರಿಯರ ಬಳಿಗೆ ಕರೆತಂದಾಗ, ಅವರಲ್ಲಿ ಎಫೆಸದ ಅನ್ಯನಾದ ತ್ರೋಫಿಮನು ಒಬ್ಬನಾಗಿದ್ದನು (ಅಪೊಸ್ತಲರ ಕೃತ್ಯಗಳು 21:17-29). ಆಗ ಅವರು ಪೌಲನನ್ನು ಹಿಡಿದು ಸೆರೆಗೆ ಹಾಕಿ, ಅವನನ್ನು ಕೈಸರೈಯಕ್ಕೆ ಕಳುಹಿಸಿದರು. ಅವನು ಅಲ್ಲಿ ದೇಶಾಧಿಪತಿಯಾದ ಫೆಲಿಕ್ಸ್ (ಅಪೊಸ್ತಲರ ಕೃತ್ಯಗಳು 23:24), ಮತ್ತು ಮಹಾಯಾಜಕನಾದ ಅನನೀಯನ ಮುಂದೆ ಹಾಜರಾದನು (ಅಪೊಸ್ತಲರ ಕೃತ್ಯಗಳು 24:1). ಪೌಲನನ್ನು ಅಪರಾಧಿಯಾಗಿ ಪರಿಗಣಿಸಬೇಕೆಂಬ ತರ್ಕವನ್ನು ಮಾಡಲು ಯೆಹೂದ್ಯರು ತೆರ್ತುಲ್ಲನೆಂಬ ಒಬ್ಬ ವಕೀಲನನ್ನು ಯೆರೂಸಲೇಮಿನಿಂದ ತಮ್ಮೊಂದಿಗೆ ಕರೆತಂದಿದ್ದರು (ಅಪೊಸ್ತಲರ ಕೃತ್ಯಗಳು 24:2, 5).

ಪೌಲನು ಅವರಿಗೆ ಉತ್ತರಿಸಿ, ನಾನು ದೇವಾರಾಧನೆ ಮಾಡುವದಕ್ಕೆ ಯೆರೂಸಲೇಮಿಗೆ ಹೋಗಿ ಹನ್ನೆರಡು ದಿವಸ ಮಾತ್ರವಾಯಿತೆಂದು ನೀನು ತಿಳಿದುಕೊಳ್ಳಬಹುದು. ಅಲ್ಲಿ ದೇವಾಲಯದಲ್ಲಾಗಲಿ ಸಭಾಮಂದಿರಗಳಲ್ಲೂ ಪಟ್ಟಣದಲ್ಲಾಗಲಿ, ನಾನು ಯಾರ ಸಂಗಡಲಾದರೂ ವಾದಿಸುವದನ್ನು ಇಲ್ಲವೆ ಜನರ ಗುಂಪು ಕೂಡಿಸುವದನ್ನು ಇವರು ಕಾಣಲಿಲ್ಲ. ಕೆಲವು ವರ್ಷಗಳಾದ ಮೇಲೆ ನಾನು ನನ್ನ ಸ್ವದೇಶದವರಿಗೆ ಧರ್ಮ ದ್ರವ್ಯಗಳನ್ನು ತರುವದಕ್ಕೂ ಕಾಣಿಕೆಗಳನ್ನು ಒಪ್ಪಿಸುವದಕ್ಕೂ ಬಂದೆನು (ಅಪೊಸ್ತಲರ ಕೃತ್ಯಗಳು 24:11, 17). ನಾನು ಯಾವುದೇ ದಂಗೆಯನ್ನು ಮಾಡಲಿಲ್ಲ - ಯೆರೂಸಲೇಮಿನಲ್ಲಿ ಈ ವಿಧವಾದ ದೊಂಬಿಯನ್ನು ಎಬ್ಬಿಸಲು ಐದು ದಿವಸಗಳು ಸಾಲುವದಿಲ್ಲವಲ್ಲಾ ಅಂದನು.[1]

ಅವನು ಯೆರೂಸಲೇಮಿಗೆ ತಂದಂಥ ಧರ್ಮದ್ರವ್ಯ ಹಾಗೂ ಕಾಣಿಕೆಗಳ ಕುರಿತಾಗಿ ಹೇಳುವಾಗ, ಅದನ್ನು ಕೂಡಿಸಲು ಪೌಲನು ಅನೇಕ ವರ್ಷಗಳನ್ನು ಕಳೆದಿದ್ದನು ಎಂಬ ಸೂಚನೆಯು ಇಲ್ಲಿರುತ್ತದೆ. ಪೌಲನು ಕೊರಿಂಥದವರಿಗೆ ಬರೆಯುವಾಗ, ಅವರು ಈ ಧರ್ಮಕಾರ್ಯದಲ್ಲಿ ಯಾವ ರೀತಿಯಲ್ಲಿ ಪಾಲುಗಾರರಾಗಬಹುದು ಎಂದು ತಿಳಿಸಿದ್ದನು. ಈ ವಿಚಾರವನ್ನು ಈಗಾಗಲೇ ಗಲಾತ್ಯದವರಿಗೆ ತಿಳಿಸಿದ್ದನು (1 ಕೊರಿಂಥ 16:1, 2). ಕೊರಿಂಥವರು ಕಾಣಿಕೆಯ ಕುರಿತಾಗಿ ಮಾಡಿದ ವಾಗ್ದಾನದ ಕುರಿತು ಕೆಲವು ವರ್ಷಗಳ ನಂತರ ಅವರಿಗೆ ನೆನಪು ಮಾಡಿದ್ದನು (2 ಕೊರಿಂಥ 9:1, 2). ಅದನ್ನು ಪೂರ್ಣಮಾಡಬೇಕೆಂದು ಅವರಿಗೆ ಮನವಿ ಮಾಡಿದ್ದನು (2 ಕೊರಿಂಥ 8:10-12; 9:3-5). ಅವನ ಈ ಧರ್ಮ ಕಾರ್ಯದಲ್ಲಿ ಯಾವುದೇ ಸಂಶಯವು ಉಂಟಾಗದಂತೆ, ಪೌಲನು ಅವರೊಂದಿಗೆ ತೀತನನ್ನು ಹಾಗೂ ಇನ್ನೊಬ್ಬ ಸಹೋದರನ್ನು ಕಳುಹಿಸಿದ್ದನು (2 ಕೊರಿಂಥ 8:16-24).

ಅವನು ತನ್ನ ಮೂರನೆಯ ಸೇವಾ ಪ್ರಯಾಣದಿಂದ ಆಸ್ಯ, ಅಖಾಯ ಹಾಗೂ ಮೆಕೆದೋನ್ಯದಿಂದ ಹಿಂದಿರುಗಿದ ನಂತರ ಪೌಲನೊಂದಿಗೆ ಏಳು ಜನರು ಪ್ರವಾಸ ಮಾಡಿದ್ದರು (ಅಪೊಸ್ತಲರ ಕೃತ್ಯಗಳು 20:4, 5). ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಒಳಗೊಂಡಿದ್ದ ಕಾಣಿಕೆಗಳನ್ನು ಸಾಗಿಸಲು ಈ ಏಳು ಜನರು ಸಹಾಯಿಸಿದ್ದರು. ಈ ಧರ್ಮ ಸಂಗ್ರಹಣೆಯ ಕಾರ್ಯವು ಎರಡು ವರ್ಷಗಳ ಕಾಲ ನಡೆದಿದ್ದರಿಂದ, ಭಾರವಾದ ಹಣದ ಚೀಲವನ್ನು ಪೌಲನೊಬ್ಬನೇ ಹೊರಲು ಸಾಧ್ಯವಾಗದೆ ಇದ್ದದ್ದರಿಂದ ಮತ್ತು ಇಬ್ಬರು ಅಥವಾ ಮೂರು ಜನರಿಂದಲೂ ಸಾಗಿಸಲು ಕಷ್ಟಕರವಾಗಿರಬಹುದು. ಒಂದು ವೇಳೆ ಈಗಾಗಲೇ ಸಂಗ್ರಹಗೊಂಡ ದ್ರವ್ಯಗಳನ್ನು ಪೌಲನಿಂದ ಅಪಹರಿಸುವ ಯತ್ನವು ನಡೆದಿರಬಹುದು (ಅಪೊಸ್ತಲರ ಕೃತ್ಯಗಳು 20:3). ಆದ್ದರಿಂದ ಪೌಲನು ತನ್ನ ಸಂಗಡಿಗರನ್ನು ಹಡಗಿನ ಪ್ರಯಾಣಮಾಡಲು ತಿಳಿಸಿ, ತಾನು ಮಾತ್ರ ಭೂಮಾರ್ಗವಾಗಿ ತ್ರೋವದಿಂದ ಅಸ್ಸೋಸಿಗೆ ಪ್ರಯಾಣ ಮಾಡುವ ಅಸಹಜವಾದ ಯತ್ನವನ್ನು ಮಾಡಿದ್ದನು (ಅಪೊಸ್ತಲರ ಕೃತ್ಯಗಳು 20:13, 14). ಒಂದು ವೇಳೆ ಕಳ್ಳರಿಗೆ ಗೊಂದಲ ಉಂಟುಮಾಡುವ ಯತ್ನವೂ ಇದಾಗಿರಬಹುದು. ಪೌಲನು ಮೂರನೆಯ ಸೇವಾ ಪ್ರಯಾಣದ ಸಮಯದಲ್ಲಿ, ಕೊರಿಂಥದವರು ತಾವು ಮಾಡಿದ ಕಾಣಿಕೆಯ ಕುರಿತ ವಾಗ್ದಾನವನ್ನು ಈಡೇರಿಸಬೇಕೆಂದು ಬರೆದಿದ್ದನು. ಯೆರೂಸಲೇಮಿನ

ದೇವ ಜನರಿಗೆ ಸೇವಾರ್ಥ ಮಾಡಬೇಕೆಂದು ಪೌಲನು ರೋಮಾಯರಿಗೂ ಸಹ ಬರೆದಿದ್ದನು (ರೋಮಾಪುರ 15:25, 26). ಆದ್ದರಿಂದ, ಸಭೆಯಲ್ಲಿ ಜರುಗಿದ ಮತ್ತೊಂದು ಪ್ರೀತಿಯ ಔದಾರ್ಯವನ್ನು ಗಮನಿಸುತ್ತೇವೆ. ಅದು ಕ್ರಿ.ಶ. 58-59ರಲ್ಲಿ ನಡೆದಿರಬಹುದು.

## ಮುಕ್ತಾಯ

ಪ್ರೀತಿಯ ಔದಾರ್ಯವು ಆದಿ ಸಭೆಯ ಪ್ರಮುಖವಾದ ಸದ್ಗುಣವಾಗಿತ್ತು. ಸ್ಥಳೀಯ ಸಭೆಗಳು ತಮ್ಮ ತಮ್ಮ ಕೊರತೆಗಳನ್ನು ಈ ವಿಧವಾಗಿ ನೀಗಿಸಿಕೊಂಡಿದ್ದರು, ಹಾಗೂ ಇತರೆ ಸ್ಥಳಗಳಲ್ಲಿನ ಕ್ರೈಸ್ತರ ಕೊರತೆಗಳನ್ನೂ ಸಹ ನೀಗಿಸಿದ್ದರು. ಪ್ರಥಮ ಶತಮಾನವು ಕ್ರೂರ ಹಾಗೂ ಅಪಾಯಕರವಾಗಿದ್ದರೂ, ಸಹೋದರರ ಸಹಾಯಕ್ಕಾಗಿ, ಕ್ರೈಸ್ತರು ಯಾವಾಗಲೂ ಸಿದ್ಧರಾಗಿದ್ದರು.

ಸಹಾಯ ಮಾಡಲು, ಅನೇಕ ವೈಯಕ್ತಿಕವಾದ ಅವಕಾಶಗಳನ್ನು ಕ್ರೈಸ್ತರು ಹೊಂದಿರುವರು (ಗಲಾತ್ಯ 6:10), ಅದಾಗ್ಯೂ ಇದು ಸಭೆಯ ಸಾಮೂಹಿಕವಾದ ಜವಾಬ್ದಾರಿಯಾಗಿರುತ್ತದೆ. ಕ್ರೈಸ್ತರು ಇಬ್ಬಾನು ಸಾರವಾಗಿ ಹಾಗೂ ಕ್ರಮವಾಗಿ ಸಾಮೂಹಿಕ ಸಭೆಯ ಕಾರ್ಯಕ್ಕಾಗಿ ಸಹಾಯಿಸುವ ಸಾಧ್ಯತೆಯಿದ್ದರೂ ವೈಯಕ್ತಿಕವಾದ ಸವಾಲುಗಳನ್ನು ಎದುರಿಸುವ ಸಾಧ್ಯತೆಯಿದೆ.

ಆದಿ ಕ್ರೈಸ್ತರು ಸಹೋದರರಿಗೆ ತೋರಿದ ಪ್ರೀತಿಯ ನಿಮಿತ್ತ ಸರ್ವಸ್ಥಳಗಳಲ್ಲೂ ಪ್ರಭಾವಿತರಾದರು (ಯೋಹಾನ 13:34, 35). ಮ್ಯಾಕ್‌ಗಾರ್ವೆಯವರು ತಿಳಿಸಿರುವಂತೆ; "ಪೂರ್ಣ ಹೃದಯದ ಔದಾರ್ಯವು ಶಬ್ಧವಾದ ಸುವಾರ್ತಾ ಪ್ರಸಾರಣೆಯಾಗಿರುತ್ತದೆ."[2]

---

ಟಿಪ್ಪಣಿಗಳು

[1]ಹನ್ನೆರಡು ದಿವಸಗಳಲ್ಲಿ, ಪೌಲನು ಎರಡು ದಿವಸಗಳನ್ನು ಪ್ರಯಾಣದಲ್ಲಿ ಕಳೆದಿದ್ದನು (ಅಪೊಸ್ತಲರ ಕೃತ್ಯಗಳು 23:31, 32). ಐದು ದಿವಸ ಸೆರೆವಾಸವಾಗಿದ್ದನು, ಅಲ್ಲಿ ಅನನೀಯನಿಗಾಗಿ ಕಾದಿದ್ದನು (ಅಪೊಸ್ತಲರ ಕೃತ್ಯಗಳು 24:1). ಈಗ ಉಳಿದದ್ದು ಕೇವಲ ಐದು ದಿವಸ ಮಾತ್ರ, ಈ ದಿವಸಗಳಲ್ಲಿ ಅವನು ದೊಂಬಿ ಮಾಡುವದು ಅಸಾಧ್ಯವಾಗಿತ್ತು. [2]J. W. McGarvey, *New Commentary on Acts of the Apostles* (Delight, Ark.: Gospel Light Publishing Co., n.d.), 230.